**ಕರ್ನಾಟಕ ಸರ್ಕಾರ**

ಸಂ.ಹಿಂವಕಇ/ಡಿಬಿಟಿ/ಸಿಆರ್–12/2013–14

ಆಯುಕ್ತರ ಕಛೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ನಂ.16–ಡಿ, 3ನೇ ಮಹಡಿ, ದೇವರಾಜ ಅರಸು ಭವನ,
ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–52, ದಿನಾಂಕ: 14.02.2014

## ಡಿ.ಬಿ.ಟಿ ಸುತ್ತೋಲೆ–8

**ವಿಷಯ:** **ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯವನ್ನು ಮಂಜೂರು ಮಾಡಲು ಅರ್ಹ ವಿದ್ಯಾರ್ಥಿಗಳ ಕಾಲೇಜು ಹಾಜರಾತಿಯನ್ನು ಇ-ಪಾಸ್ ಪೋರ್ಟಲ್ ಗೆ ಅಪ್‌ಲೋಡ್ ಮಾಡುವ ಬಗ್ಗೆ.**

**ಉಲ್ಲೇಖ:** **ಸರ್ಕಾರದ ಆದೇಶ ಸಂ.ಬಿಸಿಡಬ್ಲ್ಯೂ 516 ಬಿಎಂಎಸ್ 2013, ದಿನಾಂಕ 24.9.2013**

****

1. ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯವನ್ನು ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ ಶೇ.75ರ ಕಾಲೇಜು ಹಾಜರಾತಿ ಇರುವಂತಹ ಅರ್ಹ ವಿದ್ಯಾರ್ಥಿಗಳಿಗೆ ಮಾಸಿಕ ರೂ.1,500/– ರಂತೆ ಶೈಕ್ಷಣಿಕ ವರ್ಷದಲ್ಲಿ ಗರಿಷ್ಠ 10 ತಿಂಗಳ ಅವಧಿಗೆ ಮಂಜೂರು ಮಾಡಬೇಕಾಗಿರುತ್ತದೆ.

2. ದಿನಾಂಕ 13.2.2014ರಂದು ನಡೆದ ವಿಡಿಯೋ ಕಾನ್ಫರೆನ್ಸ್ ಮೂಲಕ, ಈ ಯೋಜನೆಯ ಸೌಲಭ್ಯವನ್ನು ಆಯಾ ತಿಂಗಳಿಗೆ ಕಾಲೇಜು ಹಾಜರಾತಿ ಶೇ.75 ಇರುವಂತಹ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಮಂಜೂರು ಮಾಡಬೇಕಾಗಿದ್ದು, ಇಂತಹ ವಿದ್ಯಾರ್ಥಿಗಳ ಕಾಲೇಜು ಹಾಜರಾತಿಯನ್ನು ಇ–ಪಾಸ್ ಪೋರ್ಟಲ್ ಗೆ ಅಪ್‌ಲೋಡ್ ಮಾಡಿ, ಹಾಜರಾತಿಗೆ ಅನುಗುಣವಾಗಿ ಮಂಜೂರಾತಿ ಆದೇಶ ಮತ್ತು ಬಿಲ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಲು ಮಂಜೂರಾತಿ ಅಧಿಕಾರಿಗಳಾದ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳಿಗೆ ಇ–ಪಾಸ್ ಪೋರ್ಟಲ್‌ನಲ್ಲಿ Option ನೀಡಬೇಕೆಂದು ಕೆಲವು ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಕೋರಿರುತ್ತಾರೆ.

3. ಅದರಂತೆ, ಪ್ರಾಜೆಕ್ಟ್ ಮ್ಯಾನೇಜರ್, ಸಿ.ಜಿ.ಜಿ, ಹೈದರಾಬಾದ್ ಇವರಿಗೆ ಇದೇ ಸಮಸಂಖ್ಯೆಯ ದಿನಾಂಕ 14.2.2014ರಂದು ಪತ್ರ ಬರೆದು, ಇ–ಪಾಸ್ ಪೋರ್ಟಲ್‌ಗೆ ಊಟ ಮತ್ತು ವಸತಿ ಸಹಾಯ ಸೌಲಭ್ಯಕ್ಕೆ ನಿಯಮಾನುಸಾರ ಅರ್ಹರಾದ ವಿದ್ಯಾರ್ಥಿಗಳಿಗೆ ಮಾತ್ರ ಕಾಲೇಜು ಹಾಜರಾತಿಯನ್ನು ಅಪ್‌ಲೋಡ್ ಮಾಡಲು ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳಿಗೆ ಇ–ಪಾಸ್ ಪೋರ್ಟಲ್‌ನಲ್ಲಿ Option ನೀಡುವಂತೆ ಸೂಚಿಸಿದೆ.

4. ಯಾವುದೇ ವಿದ್ಯಾರ್ಥಿಗಳ ಕಾಲೇಜು ಹಾಜರಾತಿ ಯಾವುದಾದರೂ ತಿಂಗಳಿಗೆ ಶೇ.75ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸಹಾಯ ಸೌಲಭ್ಯವನ್ನು ಮಂಜೂರು ಮಾಡಬಾರದು. ಉಳಿದ ತಿಂಗಳುಗಳಿಗೆ ಮಾತ್ರ ಮಂಜೂರು ಮಾಡಿ, ಇ–ಪಾಸ್ ಪೋರ್ಟಲ್‌ನಿಂದ ಮಂಜೂರಾತಿ ಆದೇಶ, ಬಿಲ್ ಹಾಗೂ ಅನುಬಂಧಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ ತಿಳಿಸಲಾಗಿದೆ.

5. ಊಟ ಮತ್ತು ವಸತಿ ಸಹಾಯ ಸೌಲಭ್ಯಕ್ಕೆ ಅರ್ಹರಾದ ಅಲೆಮಾರಿ/ಅರೆ ಅಲೆಮಾರಿ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕಾಲೇಜುವಾರು ಪಟ್ಟಿಯನ್ನು ಇ-ಪಾಸ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಂಡು, ಅಂತಹ ವಿದ್ಯಾರ್ಥಿಗಳಿಗೆ ಮಾತ್ರ ಕಾಲೇಜು ಹಾಜರಾತಿಯನ್ನು ಈ ಕೆಳಕಾಣಿಸಿದ ದಿನಾಂಕಗಳ ಒಳಗಾಗಿ ಸಂಗ್ರಹಿಸಿ, ಇ-ಪಾಸ್ ಪೋರ್ಟಲ್‌ಗೆ ಅಪ್‌ಲೋಡ್ ಮಾಡಿ ಮಂಜೂರಾತಿ ನೀಡುವ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

| | |
|---|---|
| ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ | 20.02.2014 |
| ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು | 25.02.2014 |

ನಿಮ್ಮ ವಿಶ್ವಾಸಿ

14/2/14

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

14/2/14

ಪ್ರತಿಯನ್ನು:

1. ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು,
2. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಜಂಟಿ ನಿರ್ದೇಶಕರು (ವಸತಿ ನಿಲಯ), ಹಿಂದುಳಿದ ವರ್ಗಗಳ ಆಯುಕ್ತಾಲಯ, ಬೆಂಗಳೂರು.
4. ಜಂಟಿ ನಿರ್ದೇಶಕರು (ಅಲೆಮಾರಿ ಕೋಶ) (ಪ್ರಭಾರ), ಹಿಂದುಳಿದ ವರ್ಗಗಳ ಆಯುಕ್ತಾಲಯ, ಬೆಂಗಳೂರು.
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ರಾಜ್ಯದ ಎಲ್ಲಾ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು.